ಕನ್ನಡಪ್ರಭ, ಮಂಗಳವಾರ, 20 ಮೇ 2008

# 21ರಿಂದ ಮೀನುಗಾರರ ಜಾಥಾ

**ಕನ್ನಡಪ್ರಭ ವಾರ್ತೆ,ಮಂಗಳೂರು,ಮೇ 19**
ಮೀನುಗಾರರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜುಲೈನಲ್ಲಿ ನವದೆಹಲಿ ಸಂಸತ್ ಭವನದ ಮುಂದೆ ಜರಗಲಿರುವ ಅನಿರ್ದಿಷ್ಟಾವಧಿ ಪ್ರತಿಭಟನೆ ಬಗ್ಗೆ ಜನಜಾಗೃತಿ ಹುಟ್ಟಿಸಲು ರಾಷ್ಟ್ರೀಯ ಮೀನುಗಾರರ ವೇದಿಕೆ ಜಾಥಾ ಆರಂಭಿಸಿದೆ.

ಈ ಬಗ್ಗೆ ವ್ಯವಸ್ಥೆ ಮಾಡುವುದಕ್ಕಾಗಿ ಉಚ್ಚಿಲದಲ್ಲಿ ಇತ್ತೀಚೆಗೆ ಕರ್ನಾಟಕ ಕರಾವಳಿ ಮೀನುಗಾರರ ಕ್ರಿಯಾ ಸಮಿತಿ ವತಿಯಿಂದ ಸಭೆ ಏರ್ಪಡಿಸಲಾಗಿತ್ತು.

ಈ ಕುರಿತಂತೆ ಕರ್ನಾಟಕ ಕರಾವಳಿಯಾದ್ಯಂತ ಕಾರವಾರದಿಂದ ಮಂಗಳೂರು ವರೆಗೆ ಸಭೆ ಸಂಘಟಿಸಲು ನಿರ್ಣಯಿಸಲಾಯಿತು.

ಜಾಥಾ ಮೇ 1ರಂದು ಗುಜರಾತ್‌ನಿಂದ ಪ್ರಾರಂಭವಾಗಿರುವ ಜಾಥಾ ಕನ್ಯಾಕುಮಾರಿ ಮೂಲಕ ಕೊಲ್ಕತ್ತದಲ್ಲಿ ಜೂನ್ 27ರಂದು ಸಮಾರೋಪಗೊಳ್ಳಲಿದೆ. ಕರ್ನಾಟಕ ಕರಾವಳಿಯಲ್ಲಿ ಮೇ 21ರಿಂದ 24ರ ವರೆಗೆ ಜಾಥಾ ಸಂಚರಿಸಲಿದೆ.

**ಜಾಥಾ ಮೇ 1ರಂದು ಗುಜರಾತ್‌ನಿಂದ ಪ್ರಾರಂಭವಾಗಿರುವ ಜಾಥಾ ಕನ್ಯಾಕುಮಾರಿ ಮೂಲಕ ಕೊಲ್ಕತ್ತದಲ್ಲಿ ಜೂನ್ 27ರಂದು ಸಮಾರೋಪಗೊಳ್ಳಲಿದೆ. ಕರ್ನಾಟಕ ಕರಾವಳಿಯಲ್ಲಿ ಮೇ 21ರಿಂದ 24ರ ವರೆಗೆ ಜಾಥಾ ಸಂಚರಿಸಲಿದೆ.**



ಈ ಜಾಥಾದಲ್ಲಿ ರಾಷ್ಟ್ರೀಯ ಮೀನುಗಾರರ ವೇದಿಕೆಯ ಅಧ್ಯಕ್ಷ ಹರೇಕೃಷ್ಣ ದೇಬ್‌ನಾಥ್, ಪ್ರಧಾನ ಕಾರ್ಯದರ್ಶಿ ಎನ್.ಡಿ.ಕೊಹ್ಲಿ ಮತ್ತಿತರರು ಆಗಮಿಸಲಿದ್ದಾರೆ.

ಅಸಂಘಟಿತ ಕಾರ್ಮಿಕರ ಕಾಯಿದೆ ಮತ್ತು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮೀನುಗಾರರ ಬಗ್ಗೆ ಮಾಡಿರುವ ನಿರ್ಣಯ ಜಾರಿ, ಯಾಂತ್ರಿಕ ಮೀನುಗಾರಿಕಾ ದೋಣಿ ಉಪಯೋಗಿಸುವ ಡೀಸಿಲ್ ಮೇಲಿನ ರಸ್ತೆ ಅಭಿವೃದ್ಧಿ ತೆರಿಗೆ ರದ್ದು, ಕರಾವಳಿ ನಿರ್ವಹಣಾ ಕಾಯಿದೆ ರದ್ಧತಿ ಮಾಡಬೇಕು ಎನ್ನುವುದು ಪ್ರಮುಖ ಬೇಡಿಕೆಗಳು.

ಇಷ್ಟೇ ಅಲ್ಲದೆ ಕರ್ನಾಟಕ ಕರಾವಳಿಯ 15 ಬಂದರುಗಳ ಅಭಿವೃದ್ಧಿ, ಹೂಳೆತ್ತುವಿಕೆ, ತಡೆಗೋಡೆ ನಿರ್ಮಾಣ, ಮಲ್ಪೆಯ ಟೆಬ್ಮಾ ಶಿಪ್ ಯಾರ್ಡ್ ರದ್ಧತಿ, ಕಾರವಾರದ ಸೀಬರ್ಡ್ ನೌಕಾನೆಲೆ ಕಾರ್ಯಾಚರಣೆ ಸಂದರ್ಭ ಮೀನುಗಾರಿಕೆ ನಿರ್ಬಂಧ ರದ್ಧತಿ ಇತ್ಯಾದಿ ಬೇಡಿಕೆಗಳನ್ನೂ ಮುಂದಿರಿಸಲಾಗುವುದು. ಈ ಸಭೆಯಲ್ಲಿ ಶಿವಪ್ಪ ಕಾಂಚನ್, ಹರಿಶ್ಚಂದ್ರ ಮೆಂಡನ್, ರಾಮ ಬಂಗೇರ, ವಿಜಯ ಬಂಗೇರ, ಶಂಕರ ಹೆಬ್ಲೆ, ವಾಸುದೇವ ಬೋಳೂರು, ವಸಂತ ಖಾರ್ವಿ ಭಟ್ಕಳ ಮತ್ತಿತರರು ಪಾಲ್ಗೊಂಡಿದ್ದರು.

Kannada Prabha. 20/5/2008

Karavali Munjavu. Wednesday 21/5/2008

# ಕಾರವಾರಕ್ಕೆ ಇಂದು ಜಾಥಾ

**ಕಾರವಾರ :** ರಾಷ್ಟ್ರೀಯ ಮೀನುಗಾರ ಪರಿಷತ್ತಿನ ಪಾರ್ಲಿಮೆಂಟ್ ಚಲೋ ಅಭಿಯಾನ ನಿಮಿತ್ತ ಕಾರವಾರಕ್ಕೆ ಬುಧವಾರ ಜಾಥಾ ಆಗಮಿಸಲಿದೆ. ಕಾರವಾರ , ಬೈತಖೋಲ ಬಂದರು ಪ್ರದೇಶದಲ್ಲಿ ಮಧ್ಯಾಹ್ನ 3 ಗಂಟೆಗೆ ಆಗಮಿಸುವ ಜಾಥಾ ತದನಂತರ ಕಾರ್ಯಕ್ರಮ ಮುಗಿಸಿ ಕಾರವಾರದಲ್ಲಿ ವಾಸ್ತವ್ಯ ಮಾಡಲಿದೆ. ಮೇ. 22ರಂದು 10 ಗಂಟೆಗೆ ತದಡಿಯಲ್ಲಿ 11 ಗಂಟೆಗೆ ಹೊನ್ನಾವರದಲ್ಲಿ ಸಂಜೆ 5 ಗಂಟೆಗೆ, ಭಟ್ಕಳದಲ್ಲಿ ಅಭಿಯಾನ ನಡೆಯಲಿದೆ. 23ರಂದು ಉಡುಪಿ ಜಿಲ್ಲೆಯ ಗಂಗೊಳ್ಳಿಯಲ್ಲಿ, 24ರಂದು ಮಂಗಳೂರಿನಲ್ಲಿ ಜಾಥಾ ನಡೆಯಲಿದೆ. ಬುಧವಾರದಂದು ಗೋವಾ ಮೂಲಕ ರಾಷ್ಟ್ರೀಯ ಮೀನುಗಾರ ಪರಿಷತ್ತಿನ ಪ್ರಮುಖ ಧುರೀಣರು ಕಾರವಾರಕ್ಕೆ ಆಗಮಿಸಲಿದ್ದಾರೆ ಎಂದು ಮೀನುಗಾರ ಧುರೀಣ ಪಿ.ಎಂ. ತಾಂಡೇಲ ತಿಳಿಸಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಾರರು ಅಭಿಯಾನದಲ್ಲಿ ಪಾಲ್ಗೊಳ್ಳಬೇಕೆಂದು ತಿಳಿಸಿದ್ದಾರೆ.

ಕನ್ನಡಪ್ರಭ

ಗುರುವಾರ 22 ಮೇ 2008

Kannada Prabha

# ಸಿಎಂಝಡ್ ಕಾನೂನು ವಿರೋಧಿಸಿ ಜಾಗೃತಿ ರ್‍ಯಾಲಿ

- ಕಛ್‌ನಿಂದ ಕೋಲ್ಕತ್ತಾವರೆಗೆ ಪಯಣಿಸಲಿದೆ
- ಗೋವಾದಿಂದ ಬೈತಖೋಲಕ್ಕೆ ಆಗಮನ

**ಕಾರವಾರ:** ರಾಷ್ಟ್ರೀಯ ಮೀನುಗಾರರ ವೇದಿಕೆ ಕೇಂದ್ರ ಸರ್ಕಾರ ಜಾರಿ ಮಾಡಲು ಉದ್ದೇಶಿಸಿರುವ ಕರಾವಳಿ ನಿರ್ವಹಣಾ ವಲಯ (ಸಿಎಮ್‌ಝಡ್) ಕಾನೂನನ್ನು ವಿರೋಧಿಸಿ ಗುಜರಾತಿನ ಕಛ್‌ನಿಂದ ಕೋಲ್ಕತ್ತಾ ತನಕ ರ್‍ಯಾಲಿ ಹಮ್ಮಿಕೊಂಡಿದ್ದು, ಮೀನುಗಾರರು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿರುವುದಾಗಿ ವೇದಿಕೆ ಅಧ್ಯಕ್ಷ ಹರಿಕೃಷ್ಣ ದೇವನಾಥ ಹೇಳಿದರು.

ರ್‍ಯಾಲಿ ಬುಧವಾರ ಗೋವಾ ಮೂಲಕ ಇಲ್ಲಿಗೆ ಆಗಮಿಸಿದ ಸಂದರ್ಭದಲ್ಲಿ ಸ್ಥಳೀಯ ಬೈತಖೋಲ ಬಂದರು ಪ್ರದೇಶದ ಮೀನುಗಾರರ ಯೂನಿಯನ್ ಕಟ್ಟಡದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈಗ ಜಾರಿಯಲ್ಲಿರುವ ಸಿಆರ್‌ಝಡ್ ಕಾನೂನು ತೀರ ಪ್ರದೇಶದಲ್ಲಿ ಉದ್ಯಮ ಇತ್ಯಾದಿ ನಿರ್ಮಾಣಕ್ಕೆ ಅವಕಾಶ ನೀಡದೆ ಮೀನುಗಾರರ ಹಿತರಕ್ಷಣೆ ಮಾಡುತ್ತಿದೆ. ಕೇಂದ್ರ ಸರ್ಕಾರಕ್ಕೆ ತೀರ ಪ್ರದೇಶದಲ್ಲಿ ಭೂಮಿಯನ್ನು ಎಸ್‌ಇಝಡ್, ಉದ್ಯಮಗಳಿಗೆ ಮಾರಾಟ ಮಾಡಲು ಅನುಕೂಲಕರ ಕಾನೂನು ಬೇಕಾಗಿದೆ. ಅದಕ್ಕಾಗಿ ಮೇ 1ರಂದು ಕಾನೂನಿನ ಕರಡನ್ನು ಹೊರಡಿಸಿದೆ. ಅದನ್ನು ಇಂಗ್ಲಿಷ್, ಹಿಂದಿಯಲ್ಲಿ ಇಂಟರ್‌ನೆಟ್‌ನಲ್ಲಿ ಪ್ರಕಟಿಸಲಾಗಿದ್ದು, ಅನ್ಯ ಭಾಷಿಕರಾಗಿರುವ ಮೀನುಗಾರರಿಗೆ ತಿಳಿಯದಿರಲಿ ಎಂಬ ದುರುದ್ದೇಶ ಹೊಂದಿದೆ ಎಂದು ಆಪಾದಿಸಿದರು. ➤ 3ನೇ ಪುಟ ನೋಡಿ

# ಸಿಎಂಝಡ್ ಕಾನೂನು ವಿರೋಧಿಸಿ ಜಾಗೃತಿ ರ್‍ಯಾಲಿ




➤ *1ನೇ ಪುಟದಿಂದ*

ಪ್ರಸ್ತಾಪಿತ ಸಿಎಂಝಡ್ ಕಾನೂನು ಪ್ರಕಾರ ಸಮುದ್ರದಲ್ಲಿ 22 ಕಿ.ಮೀ. ತನಕದ ಪ್ರದೇಶವನ್ನೂ ಉದ್ಯಮಿಗಳ ಬಳಕೆಗೆ ನೀಡಲು ಅನುಕೂಲ ಕಲ್ಪಿಸಲಾಗಿದೆ. ದೇಶದ 8 ಸಾವಿರ ಕಿ.ಮೀ. ಕಡಲಿನುದ್ದಕ್ಕೂ ನಾನಾ ಉದ್ಯಮಗಳು ತಲೆಎತ್ತಿದರೆ ಸಮುದ್ರ ತೀರದ ಸಾಂಪ್ರದಾಯಿಕ ಬಳಕೆದಾರರಾದ ಮೀನುಗಾರರು, ರೈತರು ತೀವ್ರ ಸಂಕಷ್ಟ ಎದುರಿಸಬೇಕಾದ ಪರಿಸ್ಥಿತಿ ಬರಲಿದೆ. ಆದ್ದರಿಂದ ಜನರಲ್ಲಿ ಜಾಗೃತಿ ಮೂಡಿಸಲು ಈ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ. ಬರುವ ಜುಲೈನಲ್ಲಿ 'ಸಂಸತ್ ಚಲೋ' ಎಂಬ ಬೃಹತ್ ಪ್ರತಿಭಟನೆ ನಡೆಯಲಿದೆ ಎಂದು ಅವರು ತಿಳಿಸಿದರು.

ದೇಶದಲ್ಲಿ 1.20 ಕೋಟಿ ಜನರಿಗೆ ಮತ್ಸ್ಯೋದ್ಯಮ ಉದ್ಯೋಗ ನೀಡಿದೆ. ಇದೊಂದು ಶೂನ್ಯ ಬಂಡವಾಳದ ಉದ್ಯಮವಾಗಿದ್ದು, ವಾರ್ಷಿಕ 30 ಸಾವಿರ ಕೋಟಿ ರುಪಾಯಿ ಆದಾಯ ತರುತ್ತಿದೆ. ಇದಲ್ಲದೆ 8 ಸಾವಿರ ಕೋಟಿ ರುಪಾಯಿಗಳ ವಿದೇಶಿ ವಿನಿಮಯ ಗಳಿಸುತ್ತಿದೆ. 45 ಲಕ್ಷ ಟನ್ ಪ್ರೋಟೀನ್‌ಯುಕ್ತ ಮೀನನ್ನು ಹಿಡಿಯಲಾಗುತ್ತಿದೆ. ಆದರೆ ಇದಾವುದನ್ನೂ ಅರ್ಥ ಮಾಡಿಕೊಳ್ಳದೆ ಹೊಸ ಕಾನೂನು ತಂದು ಕಡಲ ತೀರಗಳನ್ನು ಉದ್ಯಮಿಗಳಿಗೆ ಮಾರಾಟ ಮಾಡಿ ಲಾಭ ಗಳಿಸಲು ಕೇಂದ್ರ ಹೊಂಚುಹಾಕಿದೆ ಎಂದು ಆಪಾದಿಸಿದ ಅವರು, ವಾಸ್ತವವಾಗಿ ಕಡಲತೀರಗಳು ರಾಜ್ಯ ಸರ್ಕಾರದ ಸುಪರ್ದಿಗೆ ಬರುತ್ತವೆ. ಆದ್ದರಿಂದ ಕೇಂದ್ರ ತನಗೆ ಬೇಕಾದಂಥ ಕಾನೂನು ರೂಪಿಸುವುದನ್ನು ರಾಜ್ಯ ಸರ್ಕಾರಗಳೂ ವಿರೋಧಿಸಬೇಕೆಂದು ಮನವಿ ಮಾಡಿದರು.

ವೇದಿಕೆಯ ಈ ಹೋರಾಟವನ್ನು ದೇಶದ ವಿವಿಧೆಡೆಯ ಪರಿಸರ ಮತ್ತಿತರ ಸಂಘಟನೆಗಳು ಬೆಂಬಲಿಸುತ್ತಿವೆ ಎಂದು ಅವರು ತಿಳಿಸಿದರು. ಪಿ.ಎಂ. ತಾಂಡೇಲ, ವಾಸುದೇವ ಬೋಳಾರ, ಗಣಪತಿ ಮಾಂಗ್ರೆ, ಶ್ರೀಧರ ಹರಿಕಂತ್ರ ಮೊದಲಾದ ಸ್ಥಳೀಯರು ಹಾಗೂ ಗುಜರಾತಿನ ಅಹಮದ್ ಗುಂಜಾನಿಯಾ, ಆಂಧ್ರ ಪ್ರದೇಶದ ಟಿ.ಕೆ. ರೆಹಮಾನ್, ಮಹಾರಾಷ್ಟ್ರದ ರಾಮಕೃಷ್ಣ, ಮೋನಿಷ್ ಪಾಟೀಲ, ಒರಿಸ್ಸಾದ ಸೂರಜ್, ಪಶ್ಚಿಮ ಬಂಗಾಲದ ಮಿಲನ್ ಉಪಸ್ಥಿತರಿದ್ದರು.

## ಕಾರವಾರಕ್ಕೆ ಬಂದ ಸಿಎಂಝಡ್ ರ್‍ಯಾಲಿ

**ಕಾರವಾರ:** ಕೇಂದ್ರ ಸರ್ಕಾರ ಜಾರಿ ಮಾಡಲು ಹೊರಟಿರುವ ಕರಾವಳಿ ನಿರ್ವಹಣಾ ವಲಯ (ಸಿಎಂಝಡ್) ಕಾನೂನನ್ನು ವಿರೋಧಿಸಿ ರಾಷ್ಟ್ರೀಯ ಮೀನುಗಾರರ ವೇದಿಕೆ ಗುಜರಾತಿನಿಂದ ಕೋಲ್ಕತ ತನಕ ಹಮ್ಮಿಕೊಂಡ ಜಾಗೃತಿ ರ್‍ಯಾಲಿ ಬುಧವಾರ ಕಾರವಾರಕ್ಕೆ ಆಗಮಿಸಿತು. ಈ ರ್‍ಯಾಲಿ ಇಲ್ಲಿನ ಬೈತಖೋಲದಲ್ಲಿ ಬೀದಿ ನಾಟಕ, ಸಭೆ, ಸಮಾರಂಭಗಳ ಮೂಲಕ ಜನಜಾಗೃತಿ ಮೂಡಿಸಿತು. ರ್‍ಯಾಲಿಯಲ್ಲಿ 25 ಜನರು ಇದ್ದು, ವೇದಿಕೆ ಅಧ್ಯಕ್ಷ ಹರಿಕೃಷ್ಣ ದೇವನಾಥ ನೇತೃತ್ವ ವಹಿಸಿದ್ದಾರೆ. ಗುಜರಾತಿನ ಕಚ್‌ನಿಂದ ಹೊರಟ ಈ ರ್‍ಯಾಲಿ ಗೋವಾ ಮೂಲಕ ಕರ್ನಾಟಕ ಪ್ರವೇಶಿಸಿದ್ದು, ಗುರುವಾರವೂ ರಾಜ್ಯದ ಕರಾವಳಿಯಲ್ಲಿ ಸಂಚರಿಸಿ, ಕೇರಳ, ತಮಿಳುನಾಡು, ಆಂಧ್ರ ಪ್ರದೇಶ ಮೂಲಕ ಕೋಲ್ಕತ ತನಕ ಸಾಗಲಿದೆ. ಜೂ. 27 ರಂದು ರ್‍ಯಾಲಿ ಕೋಲ್ಕತದಲ್ಲಿ ಮುಕ್ತಾಯಗೊಳ್ಳಲಿದೆ. ಕರಾವಳಿಯುದ್ದಕ್ಕೂ ಮೀನುಗಾರರು ಇರುವ ಪ್ರದೇಶದಲ್ಲಿ ಮೀನುಗಾರಿಕೆಗೆ ಮಾರಕವಾದ ಈ ಕಾನೂನಿನ ಬಗ್ಗೆ ರ್‍ಯಾಲಿ ಜಾಗೃತಿ ಮೂಡಿಸುತ್ತಿದೆ.



ಪುಟ 12 ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ 22-5-2008

Syuktha Karnataka

ಸಿಎಂಝಡ್‌ಗೆ ವಿರೋಧ

# ರಾಷ್ಟ್ರೀಯ ಜಾಥಾ: ಜುಲೈದಲ್ಲಿ ಸಂಸತ್ ಚಲೊ ಪ್ರತಿಭಟನೆ




ಕಾರವಾರದ ಬೈತಖೋಲದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ರಾಷ್ಟ್ರೀಯ ಮೀನುಗಾರರ ವೇದಿಕೆ ಅಧ್ಯಕ್ಷ ಹರಿಕೃಷ್ಣ ದೇವನಾಥ ಮಾತನಾಡಿದರು. ಪಿ.ಎಂ. ತಾಂಡೇಲ, ವಾಸುದೇವ ಬೋಳಾರ, ಎನ್.ಡಿ. ಕೋಳ್ವಿ ಚಿತ್ರದಲ್ಲಿದ್ದಾರೆ.

ಕಾರವಾರ, 21- ಈಗಿರುವ ಕರಾವಳಿ ವಲಯ ನಿಯಂತ್ರಣ (ಸಿಆರ್‌ಝಡ್) ಕಾನೂನನ್ನು ಹೊಸಕಿ ಹಾಕಿ ಕರಾವಳಿ ನಿರ್ವಹಣಾ ವಲಯ (ಸಿಎಂಝಡ್) ಎಂಬ ಹೊಸ ಕಾನೂನನ್ನು ಕೇಂದ್ರ ಸರಕಾರ ತರಲುದ್ದೇಶಿಸಿದೆ. ಇದು ಮೀನುಗಾರರು, ರೈತರು ಸೇರಿದಂತೆ ಕರಾವಳಿ ಪ್ರದೇಶ ಮತ್ತು ಸಮುದ್ರದ ಸಾಂಪ್ರದಾಯಿಕ ಬಳಕೆದಾರರಿಗೆ ಮಾರಕವಾಗಿದೆ ಎಂದು ರಾಷ್ಟ್ರೀಯ ಮೀನುಗಾರರ ವೇದಿಕೆ ಅಧ್ಯಕ್ಷ ಹರಿಕೃಷ್ಣ ದೇವನಾಥ ಹೇಳಿದರು.

ಪ್ರಸ್ತಾವಿತ ಸಿಎಂಝಡ್ ಕಾನೂನಿನ ವಿರುದ್ಧ ಜನಜಾಗೃತಿ ಮೂಡಿಸಲು ಗುಜರಾತ್‌ನ ಕಛ್‌ನಿಂದ ಕಳೆದ ದಿ. 1ರಂದು ಹೊರಟಿದ್ದು ದೇಶದ ಎಲ್ಲ ಕರಾವಳಿ ರಾಜ್ಯಗಳ ಮೂಲಕ ಹಾಯ್ದು ಕೋಲ್ಕತಾವರೆಗೆ ಹೋಗುವ ಜಾಥಾ ಬುಧವಾರದಂದು ಇಲ್ಲಿಗೆ ಬಂದ ಸಂದರ್ಭದಲ್ಲಿ ಬೈತಖೋಲ ಮೀನುಗಾರರ ಯುನಿಯನ್ ಕಚೇರಿಯಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ತಮ್ಮ ನೇತೃತ್ವದ ಈ ಜಾಥಾದಲ್ಲಿ ವಿವಿಧ ರಾಜ್ಯಗಳ ಮೀನುಗಾರ ಸಮುದಾಯದ ಸುಮಾರು 25 ಜನರು ಪಾಲ್ಗೊಂಡಿದ್ದು ದೇಶದ ಎಂಟು ಸಾವಿರ ಕಿ.ಮೀ. ಕರಾವಳಿಯನ್ನು ಸುತ್ತಿ ಬರುವ ಜೂನ್ 27ರಂದು ಕೋಲ್ಕತಾ ತಲುಪಲಿದ್ದೇವೆ. ಸಿಎಂಝಡ್ ಕಾನೂನು ಜಾರಿ ವಿರೋಧಿಸಿ ಬರುವ ಜುಲೈ ತಿಂಗಳಲ್ಲಿ ಅಧಿವೇಶನ ನಡೆಯುವ ವೇಳೆಯಲ್ಲಿಯೆ ಸಂಸತ್ ಚಲೊ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ. ಇದರಲ್ಲಿ ಎಲ್ಲ ರಾಜ್ಯಗಳ ಮೀನುಗಾರರು, ಇತರ ವೃತ್ತಿಯವರು ಭಾಗವಹಿಸುವರು ಎಂದು ಅವರು ತಿಳಿಸಿದರು.

ಕೇಂದ್ರ ಸರಕಾರವು ಕರಾವಳಿ ಪ್ರಾಂತ್ಯವನ್ನು ಶ್ರೀಮಂತ ಸ್ವದೇಶಿ ಮತ್ತು ವಿದೇಶಿ ಉದ್ಯಮಗಳಿಗೆ ಪ್ರವಾಸೋದ್ಯಮ ಅಭಿವೃದ್ಧಿ, ವಿಶೇಷ ಆರ್ಥಿಕ ವಲಯ (ಎಸ್‌ಇಝಡ್) ಸ್ಥಾಪನೆ, ಉದ್ಯಮ ಸ್ಥಾಪನೆ ಮೊದಲಾದ ಉದ್ದೇಶಕ್ಕಾಗಿ ಮಾರಾಟ ಮಾಡಲು ಮುಂದಾಗಿದೆ. ಆದರೆ ಈಗಿರುವ ಸಿಆರ್‌ಝಡ್ ಕಾನೂನು ಇದಕ್ಕೆಲ್ಲ ವಿರೋಧವಾಗಿದ್ದು, ಮೀನುಗಾರರು ಮತ್ತು ತೀರ ಪ್ರದೇಶದ ಸಾಂಪ್ರದಾಯಿಕ ಬಳಕೆದಾರರ ಹಿತ ರಕ್ಷಣೆಗೆ ಪೂರಕವಾಗಿದೆ. ಈ ಕಾನೂನನ್ನು ಬದಲಿಸಿ ಸಿಎಂಝಡ್ ಕಾನೂನು ಜಾರಿ ಮಾಡಿ, ಸಮುದ್ರ ತೀರಗಳನ್ನು ಶಾಶ್ವತವಾಗಿ ಪರಭಾರೆ ನಡೆಸಲು ಕೇಂದ್ರ ಸರಕಾರ ಹುನ್ನಾರ ನಡೆಸಿದೆ ಎಂದು ಅವರು ಆರೋಪಿಸಿದರು.

ಎಸ್‌ಇಝಡ್ ಸ್ಥಾಪನೆ ಮಾಡುವ ಕಂಪನಿಯವರು ಸ್ಥಳೀಯರಿಗೆ ಉದ್ಯೋಗ ನೀಡುವುದಾಗಿ ಆಮಿಷ ಒಡ್ಡುತ್ತವೆ. ಆದರೆ ಗುಜರಾತ್‌ನ ಮುಂಡ್ರಾ ಸೇರಿದಂತೆ ಬೇರೆ ಬೇರೆ ಕಡೆ ಎಸ್‌ಇಝಡ್ ಸ್ಥಾಪನೆಯಾದಲ್ಲಿ ಶೇ. 1ರಷ್ಟು ಉದ್ಯೋಗವನ್ನು ಸಹ ಸ್ಥಳೀಯರಿಗೆ ನೀಡಲಾಗಿಲ್ಲ. ಇಂಥ ಸಂದರ್ಭದಲ್ಲಿ ಸಿಎಂಝಡ್ ಜಾರಿ ಮೂಲಕ ದೇಶದ 3200ರಷ್ಟು ಮೀನುಗಾರಿಕಾ ಗ್ರಾಮಗಳ ಜನರ ಹಕ್ಕನ್ನು ಕಸಿದುಕೊಳ್ಳಲು ಕೇಂದ್ರ ಸರಕಾರ ಸಂಚು ಹೂಡಿದೆ ಎಂದು ಅವರು ದೂರಿದರು.

ಶೂನ್ಯ ಬಂಡವಾಳ ಹೂಡಿಕೆಯಿಂದಲೇ 1.20 ಕೋಟಿ ಜನರಿಗೆ ಉದ್ಯೋಗ ನೀಡಿರುವ ಮೀನುಗಾರಿಕೆ ಒಂದು ಉದ್ಯಮವಲ್ಲವೆ ಎಂದು ಖಾರವಾಗಿ ಪ್ರಶ್ನಿಸಿದ ದೇವನಾಥ್- ಈ ವೃತ್ತಿಯು ದೇಶಕ್ಕೆ ವಾರ್ಷಿಕ 30 ಸಾವಿರ ಕೋಟಿ ರೂ. ಆದಾಯ ತರುತ್ತಿದೆ. ಎಂಟು ಸಾವಿರ ಕೋಟಿ ರೂ. ವಿದೇಶಿ ವಿನಿಮಯ ಗಳಿಸಿಕೊಡುತ್ತಿದೆ. ಸರಕಾರ ಇಂಥ ಮಹತ್ವದ ಅಂಕಿ ಅಂಶಗಳನ್ನು ಅವಗಣಿಸಿ, ಕೀಳು ಸ್ವಾರ್ಥಕ್ಕಾಗಿ ದೇಶದ ಭೂಮಿ ಮತ್ತು ಕಡಲ ತೀರಗಳನ್ನು ಉದ್ಯಮಿಗಳಿಗೆ ಮಾರಾಟ ಮಾಡಲು ಹೊರಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಎಂಝಡ್ ಕಾನೂನು ಜಾರಿಯಾಗುವುದನ್ನೇ ಉದ್ಯಮಿಗಳು ಕಾಯುತ್ತಿದ್ದಾರೆ. ಈ ಕಾನೂನಿನಲ್ಲಿ ಸುಮಾರು 22 ಕಿ.ಮೀ. ಸಮುದ್ರ ಪ್ರದೇಶವನ್ನು ಸಹ ಮಾರಾಟ ಮಾಡಲು ಅವಕಾಶವಿದೆ. ಕೈಗಾರಿಕೋದ್ಯಮಿಗಳು ಭೂಮಿ ಖರೀದಿಸಿದ ನಂತರ ಸಮುದ್ರದ ಅಂಚಿನ ಕಾಂಡ್ಲಾ ಕಾಡುಗಳನ್ನೆಲ್ಲ ಕಡಿದು ನಾಶಮಾಡುತ್ತಾರೆ. ವಾಸ್ತವವಾಗಿ ಕಾಂಡ್ಲಾ ಕಾಡುಗಳಲ್ಲೇ ಅನೇಕ ಮೀನುಗಳು ಮೊಟ್ಟೆಯಿಡುತ್ತವೆ. ಹತ್ತಾರು ಜೀವಿಗಳು ಅಲ್ಲಿ ಆಶ್ರಯ ಪಡೆದಿರುತ್ತವೆ. ಮೀನು ಸಂತತಿಯೆ ನಾಶವಾದರೆ ಎಲ್ಲ ಮೀನುಗಾರರು ನಿರುದ್ಯೋಗಿಗಳಾಗುತ್ತಾರೆ. ಇದರಿಂದ ವಾರ್ಷಿಕ 65 ಲಕ್ಷ ಟನ್ ಪ್ರೊಟೀನ್‌ಯುಕ್ತ ಆಹಾರ ಪೂರೈಸುವ ಉದ್ಯಮ ನಿಂತುಹೋಗುತ್ತದೆ. ಇದು ಮುಂದೆ ದೇಶದಲ್ಲಿ ಆಹಾರ ಮತ್ತು ಪೌಷ್ಟಿಕಾಂಶದ ಕೊರತೆಗೆ ಕಾರಣವಾಗಿ ಹಾಹಾಕಾರ ಉಂಟಾದೀತು ಎಂದು ಅವರು ಎಚ್ಚರಿಸಿದರು.

ಪ್ರಸ್ತಾವಿತ ಕಾನೂನಿನ ಕರಡನ್ನು ಕೇಂದ್ರ ಸರಕಾರವು ಹಿಂದಿ ಮತ್ತು ಇಂಗ್ಲಿಶ್‌ನಲ್ಲಿ ಅಂತರ್ಜಾಲದಲ್ಲಿ ಪ್ರಕಟಿಸಿದೆ. ಬಹುತೇಕ ಮೀನುಗಾರರು ಈ ಎರಡೂ ಭಾಷೆಯನ್ನು ಅರಿಯರು. ಆದ್ದರಿಂದ ಕಾನೂನಿನ ಕರಡು ಪ್ರತಿ ಮೀನುಗಾರರಿಗೆ, ರೈತರಿಗೆ ಗೊತ್ತಾಗದೇ ಇರಲಿ ಎಂದು ಸರಕಾರ ಹೀಗೆ ಮಾಡಿರುವುದಾಗಿಯೂ ಅವರು ದೂರಿದರು.

ಆದ್ದರಿಂದ ದೀರ್ಘ ಅವಧಿಯ ಜಾಥಾ ಹಮ್ಮಿಕೊಂಡು ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಉದ್ದೇಶಿತ ಕಾನೂನು ಜಾರಿಯನ್ನು ವಿರೋಧಿಸಿ ಜುಲೈ ತಿಂಗಳಲ್ಲಿ ಬೃಹತ್ ಪ್ರಮಾಣದ ಸಂಸತ್ ಚಲೊ ನಡೆಸಿ, ಕಾನೂನು ಜಾರಿ ಮಾಡದಂತೆ ಸರಕಾರದ ಮೇಲೆ ಒತ್ತಡ ಹಾಕಲಾಗುತ್ತದೆ. ಈ ಹೋರಾಟಕ್ಕೆ ದೇಶದ ವಿವಿಧ ಪರಿಸರ ಹಾಗೂ ಜನಪರ ಸಂಘಟನೆಗಳ ಬೆಂಬಲವೂ ಇದೆ ಎಂದು ಅವರು ಹೇಳಿದರು.

ಕೇಂದ್ರ ಸರಕಾರ ಈ ಕಾನೂನು ಜಾರಿ ಮಾಡಿದರೆ ಅದು ರಾಜ್ಯಗಳ ಸಂವಿಧಾನಾತ್ಮಕ ಹಕ್ಕಿನ ಉಲ್ಲಂಘನೆಯೂ ಆಗಲಿದೆ. ಈ ನಿಟ್ಟಿನಲ್ಲಿ ಕರಾವಳಿ ತೀರ ಹೊಂದಿರುವ ಎಲ್ಲ ರಾಜ್ಯ ಸರಕಾರಗಳು ಸಹ ಸಿಎಂಝಡ್ ಕಾನೂನು ಜಾರಿಯನ್ನು ಬಲವಾಗಿ ವಿರೋಧಿಸಬೇಕು ಎಂದೂ ಹರಿಕೃಷ್ಣ ದೇವನಾಥ ಮನವಿ ಮಾಡಿಕೊಂಡರು.

ವೇದಿಕೆಯ ಪ್ರಧಾನ ಕಾರ್ಯದರ್ಶಿ ಎನ್.ಡಿ. ಕೋಳ್ವಿ; ರಾಜ್ಯದ ಪ್ರಮುಖರಾದ ವಾಸುದೇವ ಬೋಳಾರ, ಪಿ.ಎಂ. ತಾಂಡೇಲ; ಗಣಪತಿ ಮಾಂಗ್ರೆ, ಶ್ರೀಧರ ಹರಿಕಂತ್ರ, ಕೆ.ಟಿ. ತಾಂಡೇಲ, ಇತರರು; ಜಾಥಾದೊಂದಿಗೆ ಬಂದಿರುವ ಕಛ್‌ನ ಅಹ್ಮದ್ ಮಂಜಾನಿಯಾ, ಆಂಧ್ರ ಪ್ರದೇಶದ ಟಿ.ಕೆ. ರೆಹಮಾನ್, ಮಹಾರಾಷ್ಟ್ರದ ರಾಮಕೃಷ್ಣ, ಒರಿಸ್ಸಾದ ಸೂರಜ, ಪಶ್ಚಿಮ ಬಂಗಾಳದ ಮಿಲನ್ ಮೊದಲಾದವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕರಾವಳಿ ಮುಂಜಾವು
22 ಮೇ, 2008 | 3

22/5/08

# ಸರಕಾರಕ್ಕೆ ಎಚ್ಚರಿಸಲು ದೇಶದ ಕರಾವಳಿಯಲ್ಲಿ ಅಭಿಯಾನ




ಪತ್ರಿಕಾಗೋಷ್ಠಿಯಲ್ಲಿ ದೇಬನಾಥ್ ಮತ್ತಿತರರು.

**ಕಾರವಾರ:** ದೇಶದ 8,118 ಕಿ.ಮಿ ಕರಾವಳಿ ತೀರದಲ್ಲಿ ವಾಸಿಸುತ್ತಿರುವ ಮೀನುಗಾರರ ಸಂಹಾರಕ್ಕಾಗಿ ದೇಶದಲ್ಲಿ ನಾನಾ ರೀತಿಯ ಕಾನೂನು ಜಾರಿಗೆ ತರಲಾಗುತ್ತಿದೆ. ಇದರಿಂದಾಗಿ ಮೀನುಗಾರಿಕೆಯನ್ನೇ ನಂಬ ಬದುಕುತ್ತಿರುವ 3.5 ಮಿಲಿಯನ್ ಕಡಲ ಮಕ್ಕಳು ಬೀದಿ ಪಾಲಾಗುವಂತಾಗಿದೆ. ಮುಂಬರುವ ಸಂಸತ್ ಅಧಿವೇಶನದಲ್ಲಿ ಕೇಂದ್ರ ಸರಕಾರ ಸಿ.ಎಮ್.ಝೆಡ್ ಮಸೂದೆ ಮಂಡನೆಗೆ ಮುಂದಾಗಿದ್ದು ಇದನ್ನು ವಿರೋಧಿಸಲು ಮತ್ತು ಕೇಂದ್ರ ಸರಕಾರಕ್ಕೆ ಎಚ್ಚರಿಕೆ ನೀಡಲು ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ರಾಷ್ಟ್ರೀಯ ಮೀನುಗಾರರ ವೇದಿಕೆ ಅಧ್ಯಕ್ಷ ಹರಿಕೃಷ್ಣ ದೇಬನಾಥ್ ಹೇಳಿದ್ದಾರೆ.

ಜುಲೈ ತಿಂಗಳಲ್ಲಿ ದೆಹಲಿ ಚಲೋ-ಸಂಸದ್ ಚಲೋ ಕಾರ್ಯಕ್ರಮ ನಿಮಿತ್ತ ಜನ ಜಾಗೃತಿಗಾಗಿ ದೇಶದ ಕರಾವಳಿ ತೀರ ಪ್ರದೇಶದಲ್ಲಿ ಮಚ್ಛಿಮಾರ್ ಅಧಿಕಾರ್ ರಾಷ್ಟ್ರೀಯ ಅಭಿಯಾನವನ್ನು ಮೇ 1 ರಿಂದ ಹಮ್ಮಿಕೊಳ್ಳಲಾಗಿದ್ದು, ಇದು ಬುಧವಾರ ಗೋವಾ ಗಡಿಯ ಮೂಲಕ ಕಾರವಾರಕ್ಕೆ ಆಗಮಿಸಿದ ಸಂದರ್ಭದಲ್ಲಿ ಪತ್ರಕರ್ತರಿಗೆ ಈ ವಿಷಯ ತಿಳಿಸಿದರು.

"ಕರಾವಳಿ ಉಳಿಸಿ, ಮೀನುಗಾರರ ಉಳಿಸಿ" ಹೆಸರಿನಲ್ಲಿ ರಾಷ್ಟ್ರೀಯ ಅಭಿಯಾನ ಕೈಗೊಂಡಿದ್ದು ಇದು ಗುಜರಾತ್‌ನ ಕಛ್ ಪಟ್ಟಣದ (▸▸ ▸▸7)

## ....ಕರಾವಳಿಯಲ್ಲಿ ಅಭಿಯಾನ

ಜಕಾವೋ ಮೀನುಗಾರರ ಗ್ರಾಮದಿಂದ ಆರಂಭಗೊಂಡಿದ್ದು ಜೂನ್ 27 ರಂದು ಕೋಲ್ಕತ್ತಾ ತಲುಪಲಿದೆ. ತದ ನಂತರ ಸಂಸದ್ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ದೇಶದ 3200 ಕ್ಕೂ ಹೆಚ್ಚು ಮೀನುಗಾರಿಕಾ ಗ್ರಾಮಗಳ, ಪಟ್ಟಣಗಳ ಮತ್ತು ಬಂದರು ಪ್ರದೇಶದಲ್ಲಿ ನೆಲೆಸಿರುವ ಮೀನುಗಾರರನ್ನು ಎಚ್ಚರಿಸಲು ಅಭಿಯಾನ ಹಮ್ಮಿಕೊಳ್ಳಲಾಗಿದೆ. ಮೀನುಗಾರರ ಹಕ್ಕಿನ ರಕ್ಷಣೆಗಾಗಿ ಮತ್ತು ಕಡಲ ಜೀವಿಯ ಉಸಿರು ಉಳಿಸುವುದಕ್ಕಾಗಿ ಮೀನುಗಾರರಿಗೆ ಉಳಿದಿರುವುದೆಂದರೆ ಹೋರಾಟ ಮಾತ್ರ. ಈ ನಿಟ್ಟಿನಲ್ಲಿ ರಾಷ್ಟ್ರ ಮಟ್ಟದಲ್ಲಿ ಮೀನುಗಾರ ಸಂಘಟನೆಗಳು ಹೋರಾಟಕ್ಕೆ ಮುಂದಾಗಿದ್ದು, ಇದು ನಿರಂತರ ಚಳುವಳಿಯಾಗಿ ಹೊರ ಹೊಮ್ಮಲಿದೆ.

ದೇಶದಲ್ಲಿ ಸುಮಾರು 32 ಲಕ್ಷ ಟನ್ ಸಮುದ್ರದ ಮೂಲಕ ಮೀನು ಹಿಡಿಯಲಾಗುತ್ತಿದೆ. ಇದರಿಂದಾಗಿ ಸರಕಾರಕ್ಕೆ ವಾರ್ಷಿಕ 4200 ಕೋ.ರೂ ಆದಾಯ ಬರುತ್ತಿದೆ. ಹೀಗಿದ್ದರೂ ದೇಶದ ಕರಾವಳಿ ಮತ್ತು ಅದರಲ್ಲಿನ ಜಲಚರ ಸಂಪತ್ತು ನಾಶಕ್ಕೆ ಹುನ್ನಾರ ನಡೆಸಲಾಗುತ್ತಿದೆ. ವ್ಯವಹಾರ ಉದ್ದೇಶದಿಂದ ಅಮೂಲ್ಯ ಕರಾವಳಿ ತೀರವನ್ನು ಬೀಚ್ ರೆಸಾರ್ಟ, ಹೋಟೆಲ್, ಗಣಿಗಾರಿಕೆ, ಕೈಗಾರಿಕೆ, ಅಣು ಮತ್ತು ಕಲ್ಲಿದ್ದಲ್ಲು ಸ್ಥಾವರಗಳು ಹಾಗೂ ಹಾನಿಕಾರಕ ರಾಸಾಯನಿಕ ಕಾರ್ಖಾನೆ ಮತ್ತು ಕೈಗಾರಿಕಾ ಜಲಕೃಷಿ ಮತ್ತು ವಿಶೇಷ ವಿತ್ತ ವಲಯ, ವಿಶೇಷ ಪ್ರವಾಸೀ ವಲಯ, ಕರಾವಳಿ ಪಟ್ಟಣ, ನಗರ ವಿಸ್ತರಣೆಗೆ, ಬಂದರು ಹಾಗೂ ಧಕ್ಕೆಗಳಿಗಾಗಿ, ಸೇತು ಸಮುದ್ರಂ ನಂತಹ ಅನಾವಶ್ಯಕ ಯೋಜನೆಗಳಿಗೆ ಧಾರೆ ಎರೆದು ನೀಡಲಾಗುತ್ತಿದೆ. ಸಾವಿರಾರು ಕೋ. ರು ಆದಾಯ ತರುವ ಮೀನುಗಾರಿಕೆ ಉದ್ಯೋಗ ಅವನತಿ ಮಾಡಿ, 10 ರು ನೀಡಿ ಖರೀದಿಸಬೇಕಾದ ಅಂಕಲ್ ಚಿಪ್ಸ್ ತಯಾರಿಸುವ ಕಂಪನಿಗೆ ಕರಾವಳಿ ತೀರ ದಾನ ಮಾಡುತ್ತಿರುವುದು ನಿಜವಾಗಿಯೂ ಮೀನುಗಾರರ ಪಾಲಿಗೆ ಎದುರಾದ ದುರಂತವೇ ಸರಿ. ಆದರೆ ಯಾವುದೇ ಕಾರಣಕ್ಕೂ ಮೀನುಗಾರರು ತಮ್ಮ ಹಕ್ಕು ಕಳೆದುಕೊಳ್ಳಲು ಬಿಡುವುದಿಲ್ಲ. ಕೊನೆ ವರೆಗೂ ಹೋರಾಡುತ್ತೇವೆ. ಕರಾವಳಿ ತೀರ ನಿರ್ವಹಣೆ ಕಾನೂನನ್ನು ಬದಲಿಸಿ ಈಗ ಕರಾವಳಿ ವಲಯ ವ್ಯವಸ್ಥೆ ಹೆಸರಲ್ಲಿ ಕಾನೂನು ಜಾರಿಗೆ ಮುಂದಾಗಿದೆ. ಇದರಿಂದಾಗಿ ಕರಾವಳಿ ತೀರ ಉದ್ಯಮಿಗಳ ಪಾಲಾಗಲಿದೆ. ಇದನ್ನು ವಿರೋಧಿಸಿ ಸಂಸತ್ತಿನಲ್ಲಿ ಸಿ.ಎಮ್.ಝೇಡ್ ಮಸೂದೆ ಮಂಡನೆಯಾಗದಂತೆ ತಡೆಯಲು ದೆಹಲಿ ಚಲೋ ಹಮ್ಮಿಕೊಳ್ಳಲಾಗುತ್ತಿದೆ. ಕೇಂದ್ರ ಸರಕಾರ ಸಿ.ಎಮ್.ಝೆಡ್ ಮಸೂದೆ ಮಂಡನೆ ಕುರಿತು ವೆಬ್ ಸೈಟ್ ಮೂಲಕ ಮೀನುಗಾರರ ಅಭಿಪ್ರಾಯ ಕೇಳಿದೆ. ಆದರೆ ಹೆಚ್ಚಿನ ಮೀನುಗಾರರು ವೆಬ್ ಸೈಟ್ ಬಳಸುವುದಿಲ್ಲ. ರಾಜ್ಯ ಸರಕಾರದ ಸೀಮಿತಕ್ಕೆ ಬರುವ ಕರಾವಳಿ ತೀರವನ್ನೂ ಕಬಳಿಸಿ ಅಲ್ಲಿಯವರೆಗೂ ಸಿ.ಎಮ್.ಝೆಡ್ ಕಾನೂನು ಜಾರಿಗೆ ಮುಂದಾಗಿರುವುದು ರಾಜ್ಯ ಸರಕಾರಕ್ಕಿರುವ ಹಕ್ಕನ್ನು ಕಸಿದು ಕೊಂಡಂತಾಗಿದೆ. ಸಿ.ಆರ್.ಝೆಡ್ ಕಾನೂನು ಮುಂದುವರೆಸುವುದು, ಕರಾವಳಿ ತೀರದಲ್ಲಿ ಅಪಾಯಕಾರಿ ಯೋಜನೆ ಜಾರಿ ಕೈ ಬಿಡುವುದು, ಮ್ಯಾಂಗ್ರೋವ್ ಗಿಡಕ್ಕೆ ಹಾನಿಯಾಗದಂತೆ ನೋಡಿಕೊಳ್ಳುವುದು, ಟ್ರಾಲರ್ ಬೋಟ್ ಮತ್ತು ಪರ್ಶಿನ್ ಬೋಟ್ ಗಳಿಗೆ ಕರಾವಳಿ ತೀರದಿಂದ 10-20 ಕಿ.ಮಿ ಮರೆಗಿನ ಸಮುದ್ರದಲ್ಲಿ ಮೀನುಗಾರಿಕೆ ನಿಷೇಧಿಸುವುದು, ಮೀನುಗಾರಿಕಾ ಕಾಯಿದೆ ಬಲಗೊಳಿಸುವುದು ಸೇರಿದಂತೆ ಹಲವಾರು ಬೇಡಿಕೆಯೊಂದಿಗೆ ಸಂಸದ್ ಚಲೋ ಹಮ್ಮಿಕೊಳ್ಳಲಾಗುವುದು. ಇದರ ಪೂರ್ವಭಾವಿಯಾಗಿ ರಾಷ್ಟ್ರದ ಕರಾವಳಿಯಲ್ಲಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ದೇಬನಾಥ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ರಾಷ್ಟ್ರೀಯ ಮೀನುಗಾರ ವೇದಿಕೆಯ ಪ್ರಧಾನ ಕಾರ್ಯದರ್ಶಿ ಎನ್.ಡಿ.ಕೋಳಿ, ಮಹಾರಾಷ್ಟ್ರದ ನರೇಂದ್ರ ಪಾಟೀಲ್, ರಾಮಭಾವ್ ಪಾಟೀಲ್, ರಾಮಕೃಷ್ಣ ತಾಂಡೇಲ್, ಮೂರೇಶ್ವರ ಪಾಟೀಲ್, ಒರಿಸ್ಸಾದ ಪತ್ರಕರ್ತ ಸುದರ್ಶನ, ಗುಜರಾತ್ ನ ಅಹ್ಮದ ಬಾಯಿ, ಕರ್ನಾಟಕ ಮೀನುಗಾರ ಕ್ರಿಯಾ ಸಮಿತಿಯ ಗೌರವಾಧ್ಯಕ್ಷ ಪಿ.ಎಮ್.ತಾಂಡೇಲ್, ಪ್ರಧಾನ ಕಾರ್ಯದರ್ಶಿ ವಾಸುದೇವ ಬೋಳೂರು ಉತ್ತರ ಕನ್ನಡ ಜಿಲ್ಲಾ ಸಹಕಾರಿ ಮೀನು ಮಾರಾಟ ಫೆಡರೇಶನ್ ಅಧ್ಯಕ್ಷ ಗಣಪತಿ ಮಾಂಗ್ರೆ, ಮೀನುಗಾರ ಧುರೀಣರಾದ ಕೆ.ಟಿ.ತಾಂಡೇಲ್, ಶ್ರೀಕಾಂತ ಹರಿಕಂತ್ರ, ಶ್ರೀಕಾಂತ ಹರಿಕಂತ್ರ, ಗೌರೀಶ ಖಾರ್ವಿ ಉಪಸ್ಥಿತರಿದ್ದರು.

# Sethusamudram project poses threat to biodiversity in Gulf of Mannar: expert

Special Correspondent

**MANGALORE:** The proposed Sethusamudram project, if implemented, will adversely affect marine biodiversity in the "protected" Gulf of Mannar Biosphere Reserve, according to Director of Kochi-based Centre for Marine Fisheries Research Institute (CMFRI), N.G.K. Pillai.

Mr. Pillai was inaugurating a seminar on "biodiversity regime and emerging challenges and opportunities" organised by Mangalore Research Centre of CMFRI here on Thursday. He said the Gulf had 3,600 species, including 300 species that were endemic to the region.

He gave the example of how projects such as Kochi shipyard had affected the marine biodiversity in Kochi estuary. He had studied virgin estuary in 1971-73 and there was little or no development activity. But another study he guided recently had revealed a biodiversity loss of up to 60 per cent.



**CREATING AWARENESS:** *N.G.K. Pillai , Director, Central Marine Fisheries Research Institute, Kochi, releasing a CD on biodiversity at a national seminar on 'biodiversity regime emerging challenges and opportunities' in Mangalore on Thursday.* – PHOTO: R. ESWARRAJ

He said a study by the World Wide Fund had revealed that a quarter of wildlife had been lost since 1970 and the maximum loss was reported in freshwater aquatic regions (29 per cent). The phenomenon of vanishing wildlife had reached alarming proportions, he said. Unless strict regulations were enforced, biodiversity loss would reach a staggering 60 to 70 per cent in the next three decades, he said. Decrying lack of political will to intervene effectively, he regretted that enforcement of many regulations left much to be desired. The only regulation adhered to was fishing holidays of 47 to 60 days. Although development activities could not be done away with, proper advice to policy makers had to be given and they might not be able to implement them for various reasons. Describing the use of trawl fishnets as "dangerous fishing practice," he said net regulations had to be strictly enforced.

The nets brought a lot of non-edible biota to the shore and this was resulting in a "significant" biodiversity loss.

Recalling that India was home to three of the 37 global biodiversity hotspots, Mr. Pillai said some 600 species here had deteriorated.

Mr. Pillai released a CD on biodiversity.

H. Shivananda Murthy, Director of Extension of the Karnataka Veterinary, Animal Sciences and Fisheries University, called for strict implementation of regulations regarding fishing nets. B.R. Vankatesh, Director, Geological Survey of India, spoke. K. Vijayakumaran, Senior Scientist with the Mangalore Research Centre of CMFRI, said the seminar was organised to coincide with the World Biodiversity Day on Thursday.

Hindu, Manglore
23rd May 2008

udayavani

ಉದಯವಾಣಿ 24-5-2008

# ಸಿಎಂಝಡ್ ಬೇಡ, ಸಿಆರ್‌ಝಡ್ ಬರಲಿ

## ಮೀನುಗಾರರ ವೇದಿಕೆ

ಉಡುಪಿ, ಮೇ 23: ಸಮುದ್ರ ಕಿನಾರೆಯ ರಕ್ಷಣೆಗಾಗಿ ಜಾರಿಗೆ ತಂದಿರುವ ಸಿಆರ್‌ಝಡ್‌ನ್ನು ಕೈಬಿಟ್ಟು ಸಿಎಂಝಡ್ (ಕೋಸ್ಟಲ್ ಮೆನೇಜ್‌ಮೆಂಟ್ ಝೋನ್) ಅನುಷ್ಠಾನಗೊಳಿಸಿರುವುದು ಸರಿಯಲ್ಲ, ಮತ್ತೆ ಸಿಆರ್‌ಝಡ್ (ಕೋಸ್ಟಲ್ ರೆಗ್ಯುಲೇಶನ್ ಝೋನ್)ನ್ನು ಜಾರಿಗೆ ತರಬೇಕು ಎಂದು ರಾಷ್ಟ್ರೀಯ ಮೀನುಗಾರರ ವೇದಿಕೆ ಅಧ್ಯಕ್ಷ ಹರಿಕೃಷ್ಣ ದೇವನಾಥ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಸಮುದ್ರ ತೀರದಿಂದ ಸುಮಾರು 500 ಮೀಟರ್‌ನಷ್ಟು ಭೂಮಿ ಸಿಆರ್‌ಝಡ್ ವ್ಯಾಪ್ತಿಗೆ ಬರುತ್ತಿದ್ದು, ಈ ಪ್ರದೇಶಗಳಲ್ಲಿ ಯಾವುದೇ ಉದ್ಯಮ ಸ್ಥಾಪನೆಗೆ ನಿರ್ಬಂಧ ಹೇರಲಾಗಿತ್ತು. ಆದರೆ ಸಿಆರ್‌ಝಡ್‌ನ್ನು ಕೈ ಬಿಟ್ಟು ಸಿಎಂಝಡ್ ಜಾರಿಗೆ ತಂದಿರುವುದರಿಂದ ಸಮುದ್ರದಲ್ಲಿ 22 ಕಿ.ಮೀ. ಪ್ರದೇಶವು ಇದರ ವ್ಯಾಪ್ತಿಗೆ ಬರುತ್ತಿದ್ದು, ಈಗಾಗಲೇ ಈ ಪ್ರದೇಶದಲ್ಲಿ ಬೃಹತ್ ಕೈಗಾರಿಕೆ, ಪ್ರವಾಸೋದ್ಯಮ, ಬಂದರು ನಿರ್ಮಾಣ, ಹಡಗು ನಿರ್ಮಾಣ ಮುಂತಾದ ಕಾರ್ಯಗಳಿಗೆ ಅವಕಾಶವನ್ನು ನೀಡಲಾಗುತ್ತಿದೆ. ಮುಂದೊಂದು ದಿನ ಸಮುದ್ರದಲ್ಲಿ ಮೀನುಗಾರಿಕೆ ನಡೆಸದಂತೆ ಸಿಎಂಝಡ್‌ನಿಂದ ನಿರ್ಬಂಧ ಹೇರಬಹುದು ಇದರಿಂದ ಮೀನುಗಾರರಿಗೆ ತೊಂದರೆಯಾಗಲಿದೆ ಎಂದರು.

ಈಗಾಗಲೇ 1.20 ಕೋ. ಜನರು ಮೀನುಗಾರಿಕೆಯಲ್ಲಿ ತೊಡಗಿಕೊಂಡಿದ್ದು, ಸರಕಾರ ಮೀನುಗಾರಿಕೆಯಲ್ಲಿ ಯಾವುದೇ ಬಂಡವಾಳವನ್ನು ತೊಡಗಿಸದಿದ್ದರೂ ವರ್ಷಕ್ಕೆ 30,000 ಕೋ. ರೂ. ಆದಾಯ ಲಭಿಸುತ್ತಿದೆ. ಮೀನುಗಾರರು ಸರಕಾರದ ಬೊಕ್ಕಸಕ್ಕೆ ಹೆಚ್ಚು ಆದಾಯವನ್ನು ನೀಡುತ್ತಿದ್ದರೂ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮೀನುಗಾರರಿಗೆ ಸಹಕಾರಿಯಾಗುವ ಯೋಜನೆಯನ್ನು ಜಾರಿಗೆ ತರುತ್ತಿಲ್ಲ. ಆದರೆ ಹೆಚ್ಚು ಲಾಭವನ್ನು ತರದ ಉದ್ಯಮಗಳಿಗೆ ಸರಕಾರಗಳು ಹೆಚ್ಚು ಪ್ರೋತ್ಸಾಹವನ್ನು ನೀಡುತ್ತಿರುವುದು ಖೇದಕರ ಎಂದರು.

ಸಿಎಂಝಡ್ ಜಾರಿಗೆ ತಂದಿರುವುದರಿಂದ ಮೀನುಗಾರಿಕೆಗೆ ಹಾಗೂ ಮೀನುಗಾರರಿಗೆ ಆಗಿರುವ ಅನ್ಯಾಯವನ್ನು ಜನತೆಗೆ ತಿಳಿಸಲು ರಾಷ್ಟ್ರೀಯ ಮೀನುಗಾರರ ವೇದಿಕೆ ಹಾಗೂ ಅಖಿಲ ಕರ್ನಾಟಕ ಮೀನುಗಾರರ ಪರಿಷದ್ ವತಿಯಿಂದ ದೇಶದಾದ್ಯಂತ ಮೀನುಗಾರರ ಹಕ್ಕುಗಳ ರಾಷ್ಟ್ರೀಯ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು, ಕಚ್‌ನಿಂದ ಆರಂಭವಾದ ಅಭಿಯಾನ ದೇಶದಾದ್ಯಂತ ಸಂಚರಿಸಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರಾಷ್ಟ್ರೀಯ ಮೀನುಗಾರರ ವೇದಿಕೆ ಕಾರ್ಯದರ್ಶಿ ಎನ್.ಡಿ.ಕೋಲಿ, ಅಖಿಲ ಕರ್ನಾಟಕ ಮೀನುಗಾರ ಪರಿಷದ್ ಕಾರ್ಯದರ್ಶಿ ವಾಸುದೇವ ಬೋಳೂರ್, ಮೀನುಗಾರ ಮುಖಂಡರಾದ ರಮೇಶ್ ದೂರಿ, ಅಹಮದ್ ಎಲ್ಲಿಯಸ್ ಮಂಜೇಲಿಯಾ, ಟಿ.ಕೆ. ರೆಹಮಾನ್, ದೇಬಶಿಶ್ ಶ್ಯಾಮಲ್, ಸುದರ್ಶನ ಉಪಸ್ಥಿತರಿದ್ದರು.

THE TIMES OF INDIA, MANGALORE
SATURDAY, MAY 24, 2008

TIMES CITY

# Team visits fishing villages in Uttara Kannada

TIMES NEWS NETWORK

**Udupi:** A team of the National Fishworkers' Forum has visited several fishing villages in the Uttara Kannada coast, to study the problems of the fishermen in the district.

The 30-member team, under the programme 'Machhimar Adhikar Rashtriya Abhiyan', with a motto 'Save the Coast, Save Fishermen', visited Majali, Karwa, Thadari, Honnavar and Bhatkal, before arriving Udupi on Friday.

Harikrishna Debanath, chairperson of NFF along with N D Koli, general secretary, Akhila Karnataka Fishermen Parishad, after interacting with the fisher folk in the district, vehemently criticized the authorities' move to replace the CRZ notification of 1991 with a new CMZ notification.

Addressing reporters, Debanath and Koli said that in the opinion of the fishermen, the new CMZ notification was designed to condone all violations of the CRZ and to accommodate SEZs and STZs.

Debanath said if the intention of the authorities is straight, they should publish the draft notification in newspapers and direct the state governments to disseminate it at panchayat levels. According to him, siltation of the channels, blanket ban on fishing due to military exercise and the mega tourism project of a real estate business house are among the most serious problems faced by the fishermen.

The team which started on May 1 from Jakhau in Kutch, Gujarat, will now travel towards Kanyakumari.

Deccan Herald 25/5/08

# Withdraw CMZ draft notification: NFF

DH NEWS SERVICE

**NFF DEMANDS**

- Dredge all silted fishing harbours
- Implement of CRZ notification 1991
- Fishworkers should not be made victims of maritime boundary disputes
- Waive all debts of poor fishermen
- Provide sufficient cheaper fuel
- Stop import of fish
- Reform marine fishing regulation Acts
- No SEZs, nuclear plants, intensive aquaculture, destruction of mangroves on our coast

MANGALORE: Kolkata-based National Fishworkers' Forum (NFF) has urged the Union Ministry of Environment and Forest (MoEF) to withdraw its Coastal Management Zone (CMZ) draft notification immediately.

Addressing journalists here on Saturday, Forum Chairperson Harekrishna Debnath strongly criticised the government's move to replace the Coastal Regulation Zone (CRZ) Notification of 1991 with the new CMZ, stating that the new notification would jeopardise the natural resources and livelihood of the fisherfolk and other coastal communities, if implemented.

He said the people across the Indian coastline consider the new CMZ notification as a design to condone all violations of the CRZ and a machination to satisfy the greed of big companies and rich classes. "Ultimately, this would result in a crisis of food and nutritional security of the people," he pointed out.

Stating that the MoEF is "bypassing the coastal people with a deceptive and manipulative approach", Mr Debnath said the government has put up the draft notification on the Internet in order to collect objections and comments from the public, in a situation where majority of the fishermen do not know what is Internet.

"If the government is sincere in protecting the coastal zone, it should enact a national legislation for conservation of coastal and marine biodiversity that inter alia protects traditional fisher people's preferential access," he pressed.

The fishing harbours on the Karnataka coast are heavily silted leading to repeated accidents and boat capsizes.

The mega tourism project proposed for Uttara Kannada coast is also a potential threat, he observed.

The fishing communities will carry out a Parliament Chalo in the 3rd week of July to press for a 15-point 'charter of demands,' under the banner of Macchimar Adhikar Rashtriya Abhiyan, he added.

Akhila Karnataka Fishermen Parishad Secretary Vasudev Boloor, NFF General Secretary N D Koli, Ahmed Ellyus Manjelia, a fishermen from Kutch were present in the press meet.

Karnataka

4 THE NEW INDIAN EXPRESS
THURSDAY, MAY 29 | 2008 | MADURAI

MOVE TO REPLACE CRZ

# NFF to launch campaign against Coastal Zone Management

## Captive ports would put country boats and fibreglass boats out of work

**Express News Service**
**Madurai, May 28**

The National Fish Workers' Forum (NFF) is organising a ten-day campaign in the coastal districts of Tamil Nadu seeking to protect the rights of the fishermen from June 1.

Addressing a joint press meet organised by the Coastal Action Network (CAN) and the NFF here on Wednesday, CNN State convenor Jeeva said that the campaign was aimed at protesting the proposed move to replace the existing fishermen-friendly Coastal Regulation Zone - 1991 (CRZ) with the Coastal Zone Management (CZM) and against the Sethusamudram Ship Canal Project (SSCP).

The move to implement the CZM was to bring the entire coastal region under the control of the Union Ministry of Forests and Environment from the purview of the traditional fishermen community so that 'developmental projects' like beach resorts, hotels and industries could be started in coastal areas, prohibited by the CRZ.

Expressing apprehension about the construction of small captive ports and private fishing harbours under the CZM, the executive committee member of NFF, T Peterdas, said that these harbour projects were aimed at making fishing a port based industry.

"If this materialises, around 40,000 country boats and vallams plus 75,000 fibreglass boats in Tamil Nadu would go out of the fishing industry." This would adversely affect the harvesting of fish as 70 percent of catch in the State was now brought ashore by country craft, vallams and fibreglass boats.

These leaders were also disappointed over the intransigence of political parties as none came forward to speak in their favour. According to Peterdas, politicians consider the fishermen community as a weak vote bank.

The campaign starts from Manavalakurichi in Kanyakumari district on June 1 and pass through the coastal districts of Tirunelveli, Thoothukudi, Ramanathapuram, Pudukottai, Thanjavur, Thiruvarur, Nagapattinam, Karaikal, Cuddalore, Pudhucherry, Kancheepuram, Villupuram and Chennai.

NFF executive committee member Paulsamy and CNN state committee member Gandhimathi were also present during the press briefing.

MADURAI
THE HINDU * FRIDAY, MAY 30, 2008

# Withdraw notification on coastal zone: fishermen

Special Correspondent

**MADURAI:** Representatives of fishermen organisations have called for the withdrawal of the Coastal Management Zone Notification, 2008, as it "threatened the livelihood of fisherfolk."

Addressing a press conference here on Wednesday, representatives of National Fishworkers' Forum said that the Government, instead of "imposing" the CMZ Notification, should attempt to implement the Coastal Regulation Zone Notification, 1991. It should recognise the inalienable traditional and customary rights of fisherfolk and protect the coast from special economic zones, nuclear power plants and polluting industries.

T. Peter Das of Kanyakumari district described the 2008 notification as an attempt to marginalise small fishermen, who owned country boats and catamarans. The new categorisation of the shore would make it a dumping yard as building activity would be allowed.

M. Jeeva of Madurai said that the notification facilitated seaside tourism and industrial activity, making the seashore vulnerable to commercial interests. It also sought to legalise all illegal constructions along the coast. The construction of private harbours, he felt, would marginalise small fishermen further.

The 'setback line' proposed by the notification, to be drawn on the basis of a scientific study, would push the fishermen already affected by the tsunami further away from the shore, Mr. Jeeva alleged.

A. Paulsamy of Ramanathapuram called for the withdrawal of the Sethusamudram Ship Channel Project as it would further add to the problems of fishermen who had been affected by shrimp farms along the coast. Any new alignment for the project would endanger marine life, he added.

### Campaign from June 1

The Tamil Nadu leg of the National Campaign for Protecting Fisher People Rights that calls for withdrawal of the 2008- notification will begin from Kanyakumari on June 1. It will reach Pulicat on June 10 after passing through the coastal districts of Tamil Nadu and Puducherry.

Udayavani 14/6/2008

12 UDAYAVANI – MANIPAL ಪ್ರಾದೇಶಿಕ ವಾರ್ತೆಗಳು

# ಸಿಎಂಝಡ್ ಕರಡು ಅಧಿಸೂಚನೆ ಪ್ರಕಟ

## ನಿಯಂತ್ರಣದ ಬದಲು ನಿರ್ವಹಣೆಗೆ ಸ್ಥಿತ್ಯಂತರ

■ ಕೇಶವ ಕುಂದರ್

ಮಂಗಳೂರು, ಜೂ. 13: ಬಹು ಚರ್ಚಿತ ಕರಾವಳಿ ವಲಯ ನಿರ್ವಹಣೆ ( ಸಿಎಂಝಡ್)ನಿಯಮ ಅನುಷ್ಠಾನ ಬಗ್ಗೆ ಕೇಂದ್ರ ಸರಕಾರ ಹೊರಡಿಸಿರುವ ಕರಡು ಅಧಿಸೂಚನೆ ಮೀನುಗಾರಿಕಾ ಸಮುದಾಯ ಮತ್ತು ಪರಿಸರವಾದಿಗಳಿಂದ ತೀವ್ರ ಪ್ರತಿರೋಧ ಎದುರಿಸುತ್ತಿದೆ.

ಮೇ 1ರಂದು ಕೇಂದ್ರ ಸರಕಾರದ ಗಜೆಟ್‌ನಲ್ಲಿ ಸಿಎಂಝಡ್ ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಆ ಬಗ್ಗೆ ಆಕ್ಷೇಪಣೆ, ಸಲಹೆಗಳಿದ್ದಲ್ಲಿ ಗಜೆಟ್ ನೋಟಿಫಿಕೇಶನ್ ದಿನಾಂಕದಿಂದ 60 ದಿನಗಳೊಳಗೆ ಕಾರ್ಯದರ್ಶಿ, ಪರಿಸರ ಮತ್ತು ಅರಣ್ಯ ಸಚಿವಾಲಯ, ಪರ್ಯಾವರನ್ ಭವನ್, ಸಿಜಿಓ ಕಾಂಪ್ಲೆಕ್ಸ್ ಲೋದಿ ರಸ್ತೆ, ಹೊಸದಿಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.



ಚಿತ್ರ: ಸತೀಶ್ ಇರಾ.

ಸಮುದ್ರ ತೀರ ಸಂರಕ್ಷಿಸುವ ಮತ್ತು ಪರಿಸರವನ್ನು ಕಾಪಾಡುವ ನಿಟ್ಟಿನಲ್ಲಿ 1991ರಲ್ಲಿ ಅನುಷ್ಠಾನಗೊಂಡಿದ್ದ ಕರಾವಳಿ ನಿಯಂತ್ರಣ ವಲಯ (ಸಿಆರ್‌ಝಡ್) ನಿಯಮಕ್ಕೆ ಬದಲಿಯಾಗಿ ಸಿಎಂಝಡ್ ನಿಯಮ ರೂಪುಗೊಂಡಿದೆ. ಕರಾವಳಿ ಪ್ರದೇಶದಲ್ಲಿ ಸುಸ್ಥಿರ ಅಭಿವೃದ್ಧಿ ಹಾಗೂ ಕರಾವಳಿ ಸಂಪನ್ಮೂಲಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಸಿಆರ್‌ಝಡ್‌ನಲ್ಲಿದ್ದ ಕೆಲವು ನ್ಯೂನತೆಗಳನ್ನು ಸರಿಪಡಿಸುವ ಹಾಗೂ ಇದಕ್ಕೆ ತಿದ್ದುಪಡಿಗಳನ್ನು ತಂದು ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವ ಉದ್ದೇಶದಿಂದ ವಿಜ್ಞಾನಿ ಡಾ। ಸ್ವಾಮಿನಾಥನ್ ಅವರ ಸಮಿತಿ ನೀಡಿದ ವರದಿ ಆಧಾರದ ಮೇಲೆ ಸಿಎಂಝಡ್‌ನ್ನು ರೂಪಿಸಲಾಗಿದೆ ಎಂದು ಅಧಿಸೂಚನೆಯ ಪ್ರಸ್ತಾವನೆಯಲ್ಲಿ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ಹೇಳಿಕೊಂಡಿದೆ.

ಸಿಆರ್‌ಝಡ್‌ನಂತೆ ಇಲ್ಲಿ ಕೂಡ ಕರಾವಳಿಯನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. ವಲಯ-1 ಪರಿಸರಾತ್ಮಕವಾಗಿ ಅತೀ ಸೂಕ್ಷ್ಮ ಪ್ರದೇಶಗಳನ್ನು ಒಳಗೊಂಡಿದೆ. ವಲಯ - 2 ಸಿಎಂಝಡ್ 1ರಿಂದ ಹೊರತಾದ, ಆರ್ಥಿಕವಾಗಿ ಮಹತ್ವವನ್ನು ಹೊಂದಿರುವ, ಅತಿ ಜನದಟ್ಟಣೆ ಇರುವ ಹಾಗೂ ಸಾಂಸ್ಕೃತಿಕ ಮತ್ತು ವ್ಯೂಹಾತ್ಮಕವಾಗಿ ಪ್ರಾಮುಖ್ಯತೆಯನ್ನು ಹೊಂದಿರುವ ಪ್ರದೇಶ. ಕರಾವಳಿ ತೀರದ ಪ್ರತಿ ಚದರ ಕಿ.ಮೀ.ಗೆ 400 ಮಂದಿ ದಟ್ಟಣೆ ಹೊಂದಿರುವ ನಗರ ಸಭೆ, ಪುರಸಭೆ, ಗ್ರಾಮಪಂಚಾಯತ್ ಹಾಗೂ ಮಹಾನಗರಪಾಲಿಕೆಗಳ ಆಡಳಿತಾತ್ಮಕ ಗಡಿಗಳವರೆಗಿನ ಪ್ರದೇಶಗಳು ಇದರ ವ್ಯಾಪ್ತಿಗೆ ಬರುತ್ತದೆ. ವಲಯ-3 ಕರಾವಳಿ ತೀರದ ನೀರು ಸೇರಿದಂತೆ ಇತರ ಮುಕ್ತ ಪ್ರದೇಶಗಳು, ಭರತ ಕಾಲದಲ್ಲಿ ನೀರು ಒಳನುಗ್ಗುವ ಸ್ಥಳಗಳು ಹಾಗೂ ಸಿಎಂಝಡ್ 1,2 ಹಾಗೂ 4 ರಿಂದ ಹೊರತಾದ ಪ್ರದೇಶಗಳು ಒಳಗೊಳ್ಳುತ್ತವೆ. ವಲಯ-4 ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ ಹಾಗೂ ಇತರ ದ್ವೀಪಗಳು ಒಳಗೊಳ್ಳುತ್ತವೆ. ಇಲ್ಲಿ ಸಿಝಡ್‌ಎಂಪಿನಿಂದ ಅನುಮತಿ ಪಡೆದುಕೊಂಡು ಚಟುವಟಿಕೆಗಳನ್ನು ನಡೆಸಬಹುದಾಗಿದೆ.

**ಕಳವಳಕ್ಕೆ ಕಾರಣ:** ಸಿಆರ್‌ಝಡ್ ಎಂಬುದು ಕರಾವಳಿ ವಲಯ ನಿಯಂತ್ರಣವಾಗಿದ್ದರೆ ಸಿಎಂಝಡ್ ಕರಾವಳಿ ವಲಯ ನಿರ್ವಹಣೆ. ಈ ಸ್ಥಿತ್ಯಂತರವೇ ಗಂಭೀರ ಕಳವಳಕ್ಕೆ ಮೂಲವಾಗಿದೆ. ಕರಾವಳಿ ತೀರದ ಸಂರಕ್ಷಣೆಯೇ ಮೂಲ ಉದ್ದೇಶವಾಗಿಟ್ಟುಕೊಂಡಿರುವ ಸಿಆರ್‌ಝಡ್ ಸಮುದ್ರ ತೀರದಲ್ಲಿ ತಲೆತಲಾಂತರದಿಂದ ವಾಸಿಸುತ್ತಾ, ಸಾಗರವೇ ಬದುಕು ಆಗಿರುವ ಮೀನುಗಾರ ಸಮುದಾಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಕೆಲವು ಅವಕಾಶಗಳನ್ನು ನೀಡಿದೆ. ಆದರೆ ಸಿಎಂಝಡ್‌ಗೆ ಕರಾವಳಿ ತೀರದ ರಕ್ಷಣೆಗಿಂತ ಇತರ ಹಿತಾಸಕ್ತಿಗಳತ್ತ ಹೆಚ್ಚು ಗಮನ ಹರಿಸಿದೆ ಎಂದು ಈ ಬಗ್ಗೆ ಅಧ್ಯಯನ ನಡೆಸಿರುವ ವಿ. ವಿವೇಕಾನಂದನ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕರಾವಳಿಯ ಸಂರಕ್ಷಣೆ ಎಂದು ಹೇಳುತ್ತಲೇ ಸಿಎಂಝಡ್ ಸಮಗ್ರ ಕರಾವಳಿ ವಲಯ ನಿರ್ವಹಣಾ ಯೋಜನೆ (ಐಸಿಝಡ್‌ಎಂಪಿ) ಅನ್ನು ಎದುರಿಗಿಟ್ಟುಕೊಂಡು ಕರಾವಳಿ ತೀರವನ್ನು ವಾಣಿಜ್ಯ ಉದ್ದೇಶಗಳಿಗೆ ತೆರೆದಿಡುವ, ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ನೀಡುತ್ತದೆ. ಮೀನುಗಾರರ ರಕ್ಷಣೆ ಎಂದು ಹೇಳುತ್ತಲೆ ಅವರನ್ನು ತೀರದಿಂದ ದೂರಕ್ಕಟ್ಟುವ ಹುನ್ನಾರ ಇದರಲ್ಲಿ ಅಡಗಿದೆ ಎಂದು ಮೀನುಗಾರ ಮುಖಂಡರು ಕಳವಳ ವ್ಯಕ್ತಪಡಿಸುತ್ತಾರೆ.

**2008 ವರೆಗಿನ ನಿರ್ಮಾಣ ಸಕ್ರಮ:** ಸಿಎಂಝಡ್‌ನ ಇನ್ನೊಂದು ಮುಖ್ಯ ಲಕ್ಷಣ ಎಂದರೆ ಕರಾವಳಿ ವಲಯ ನಿಯಂತ್ರಣ ನಿಯಮವನ್ನು ಉಲ್ಲಂಘಿಸಿ 2008 ವರೆಗೆ ನಿರ್ಮಿಸಿರುವ ಕಟ್ಟಡಗಳು, ನಿರ್ಮಾಣಗಳನ್ನು ಸಕ್ರಮಗೊಳಿಸುವುದು. ಸಿಆರ್‌ಝಡ್‌ನಲ್ಲಿ ಇದಕ್ಕೆ ಕಾಲಮಿತಿ 1991 ಇಸವಿಯನ್ನು ನಿಗದಿಪಡಿಸಲಾಗಿತ್ತು. ಅಕ್ರಮ ನಿರ್ಮಾಣಗಾರರಿಗೆ ಸಹಾಯಮಾಡುವ ಉದ್ದೇಶದಿಂದಲೇ ಸಿಎಂಝಡ್‌ನಲ್ಲಿ ಈ ಪರಿವರ್ತನೆ ಮಾಡಲಾಗಿದೆ ಎಂಬುದು ವಿಶ್ಲೇಷಣೆಕಾರರ ಅಭಿಪ್ರಾಯವಾಗಿದೆ.

**ಪ್ರತಿಭಟನೆಗೆ ಸಜ್ಜು:** ಈ ಅಧಿಸೂಚನೆ ಕರಾವಳಿಯ ಮೀನುಗಾರ ಸಮುದಾಯದ ಜೀವನ ನಿರ್ವಹಣೆ ವ್ಯವಸ್ಥೆ ಹಾಗೂ ಕರಾವಳಿಯ ಪರಿಸರ ವ್ಯವಸ್ಥೆಗೆ ಮಾರಕವಾಗಿದ್ದು ಇದನ್ನು ಕೈಬಿಟ್ಟು ಮೀನುಗಾರರ ಸಮುದಾಯದ ಬೇಡಿಕೆಗೆ ಅನುಗುಣವಾಗಿ ವಿಸ್ತೃತ ಶಾಸನ ರೂಪುಗೊಳ್ಳುವವರೆಗೆ 1991ರ ಸಿಆರ್‌ಝಡ್ ನಿಯಮವನ್ನು ಉಳಿಸಿಕೊಂಡು ಅದರ ಮೂಲ ರೂಪದಲ್ಲೇ ಅನುಷ್ಠಾನಗೊಳಿಸಬೇಕು ಎಂದು ಮೀನುಗಾರರ ರಾಷ್ಟ್ರೀಯ ವೇದಿಕೆ ಈಗಾಗಲೇ ಆಗ್ರಹಿಸಿದೆ.

ಸಿಎಂಝಡ್ ಕರಡು ಅಧಿಸೂಚನೆ ಹೊರಬೀಳುತ್ತಿದ್ದಂತೆಯೇ ಮೀನುಗಾರರು ಮತ್ತು ಪರಿಸರವಾದಿಗಳು ಇದರ ವಿರುದ್ಧ ಜನಾಂದೋಲನವನ್ನು ಹುಟ್ಟು ಹಾಕಿದ್ದಾರೆ. ಈಗಾಗಲೇ ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಜೂ. 21ಕ್ಕೆ ಕೋಲ್ಕತ್ತಾದಲ್ಲಿ ಬೃಹತ್ ಸಮಾವೇಶ ಜರಗಲಿರುವುದು. ಜು.21 ಹಾಗೂ 21 ರಂದು ಸಂಸತ್ ಭವನದ ಮುಂದೆ ಬೃಹತ್ ಪ್ರದರ್ಶನ ನಡೆಸಲುದ್ದೇಶಿಸಲಾಗಿದೆ ಎಂದು ಮೀನುಗಾರರ ರಾಷ್ಟ್ರೀಯ ವೇದಿಕೆ ಪ್ರಧಾನ ಕಾರ್ಯದರ್ಶಿ ವಾಸುದೇವ ಬೋಳೂರು ತಿಳಿಸಿದ್ದಾರೆ.